ಹೃದಯದ ವೇದನೆ

✍️ಶ್ರೀವಲ್ಲಿ ರೈ ಮಾರ್ಟೆಲ್



ಬಂಗಾರಕ್ಕೆ ಕಬ್ಬಿಣದ ಸುತ್ತಿಗೆಯಿಂದ ಹೊಡೆದು ರೂಪ ಕೊಡುತ್ತಾರೆ, ಅದೇ ರೀತಿ ಕಬ್ಬಿಣಕ್ಕೂ ಕಬ್ಬಿಣದ ಸುತ್ತಿಗೆಯಿಂದಲೇ ಹೊಡೆದು ರೂಪ ಕೊಡುತ್ತಾರೆ. ಆದರೆ ಕಬ್ಬಿಣದ ಸುತ್ತಿಗೆಯಿಂದ ಕಬ್ಬಿಣಕ್ಕೆ ಹೊಡೆಯುವಾಗ ಆಗುವಷ್ಟು ಶಬ್ದ, ಕಬ್ಬಿಣದ ಸುತ್ತಿಗೆಯಿಂದ ಬಂಗಾರಕ್ಕೆ ಹೊಡೆಯುವಾಗ ಆಗುವುದಿಲ್ಲ. ಇದಕ್ಕೆ ಕಾರಣ ಏನಿರಬಹುದು ಎಂದು ಯೋಚಿಸಿ, ಒಂದು ದಿನ ಬಂಗಾರವು ಕಬ್ಬಿಣದ ಬಳಿ ಹೋಗಿ ಕೇಳಿತಂತೆ:

"ನನಗೂ ನಿನ್ನಂತೆಯೇ ಕಬ್ಬಿಣದ ಸುತ್ತಿಗೆಯಿಂದಲೇ ಹೊಡೆಯುತ್ತಾರೆ, ಆದರೆ ನಾನು ನಿನ್ನ ಹಾಗೆ ಬಾಯಿಬಿಟ್ಟು ಕಿರುಚುವುದಿಲ್ಲ. ನೀನು ಯಾಕೆ ಅಷ್ಟೊಂದು ಬೊಬ್ಬೆ ಹೊಡೆಯುತ್ತೀಯಾ?" ಎಂದು.

ಆಗ ಕಬ್ಬಿಣವು ಬಂಗಾರಕ್ಕೆ ಒಂದು ಮಾತು ಹೇಳಿತಂತೆ:

"ನಿನಗೂ ಕಬ್ಬಿಣದ ಸುತ್ತಿಗೆಯಿಂದಲೇ ಏಟು ಬೀಳುತ್ತದೆ ನಿಜ, ಆದರೆ ನಿನಗೂ ಕಬ್ಬಿಣಕ್ಕೂ ಯಾವುದೇ ಸಂಬಂಧವಿಲ್ಲ (ಅನ್ಯರು ನಿನಗೆ ಹೊಡೆಯುತ್ತಿದ್ದಾರೆ). ಆದರೆ ನನ್ನ ಕಥೆ ನಿನ್ನಂತಲ್ಲ, ನನಗೆ ಆ ಸುತ್ತಿಗೆಯ ಜೊತೆ ಅತ್ಯಂತ ಹತ್ತಿರದ ಸಂಬಂಧವಿದೆ. ಹೇಗೆಂದರೆ, ನನ್ನವರೇ ನನಗೆ ಹೊಡೆಯುವಾಗ ಅದು ಕೇವಲ ನನ್ನ ಶರೀರಕ್ಕೆ ಮಾತ್ರವಲ್ಲ, ನನ್ನ ಹೃದಯಕ್ಕೂ ತೀಡುತ್ತದೆ. ಹಾಗಾಗಿ ಆ ವೇದನೆಯನ್ನು ತಡೆದುಕೊಳ್ಳಲು ಸಾಧ್ಯವಾಗದೆ ನಾನು ಬೊಬ್ಬೆ ಹೊಡೆಯುತ್ತೇನೆ" ಎಂದು. 😭

ಈ ಮಾತು ಕೇವಲ ಕಲ್ಪನೆಯಾಗಿದ್ದರೂ ನೂರಕ್ಕೆ ನೂರು ಸತ್ಯ. ಯಾರೋ ಅಪರಿಚಿತರು ನಮಗೆ ನೋವು ಕೊಟ್ಟರೆ ನಾವು ಸುಲಭವಾಗಿ ಮರೆತುಬಿಡಬಹುದು. ಆದರೆ ನಮ್ಮವರೇ ನಮಗೆ ನೋವು ಕೊಟ್ಟಾಗ, ಆ ಹೃದಯದ ವೇದನೆಯನ್ನು ಸಹಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಏಕೆಂದರೆ ಅಲ್ಲಿ ಏಟು ನೀಡುತ್ತಿರುವುದು ಹೊರಗಿನವರಲ್ಲ, ನಮ್ಮದೇ ಪ್ರೀತಿಪಾತ್ರರು!